**ಸಾಕ್ಷಿಯನ್ನು ದಿಃ 15.09.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ**

ಸರ್ವೇ ನಂ. 88 ರ ಬಗ್ಗೆ ನನ್ನ ದೊಡ್ಡಪ್ಪನವರ ಬಳಿ 2014 ರಲ್ಲಿ ತಿಳಿದುಕೊಂಡಿರುತ್ತೇನೆ. 2014 ರಲ್ಲಿ ಸರ್ವೇ ನಂ. 88 ರ ಬಗ್ಗೆ ಗೊತ್ತಾದ ನಂತರ ಸದರಿ ಆಸ್ತಿಯ ದಾಖಲೆಗಳನ್ನು ತೆಗೆದು ನೋಡಲು ತೊಂದರೆ ಇತ್ತಾ ಎಂದರೆ ನೋಡಲು ತೊಂದರೆ ಇಲ್ಲ ಎಂದು ಉತ್ತರಿಸಿರುತ್ತಾರೆ. 8 ನೇ ಪ್ರತಿವಾದಿಯನ್ನು ಈ ದಾವೆಯಲ್ಲಿ ಸೇರಿಸುವಾಗ ಮಧ್ಯಂತರ ಅರ್ಜಿ ಸಲ್ಲಿಸುವ ಸಮಯದಲ್ಲಿ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಸರ್ವೇ ನಂ. 88 ನೇತ್ರಾವತಿಯವರಿಗೆ ಬರುವ ಮೊದಲು ನನ್ನ ಅಜ್ಜ ತಾತ ಹೆಸರಿನಲ್ಲಿತ್ತು. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಸರ್ವೇ ನಂ. 88 ರ ಚೆಕ್ ಬಂಧಿ ಈಗಲೂ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು ಸರ್ವೇ ನಂ. 88 ರಲ್ಲಿ ನಿವೇಶನಗಳಾಗಿದ್ದು ಚೆಕ್ ಬಂಧಿ ಗೊತ್ತಾಗುತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸರ್ವೇ ನಂ. 88 ರಲ್ಲಿ ಎಷ್ಟು ಪೋಡ್ ಆಗಿದೆ ಎಂದು ತಿಳಿದುಕೊಂಡಿರುವುದಿಲ್ಲ. ಸರ್ವೇ ನಂ. 88/1 ರ ಖಾತೆಯು 8 ನೇ ಪ್ರತಿವಾದಿಯವರ ಹೆಸರಿನಲ್ಲಿರುವುದನ್ನು ಇದುವರೆಗೂ ಪ್ರಶ್ನಿಸಿರುವುದಿಲ್ಲ. ಸರ್ವೇ ನಂ. 88 ರ ಕಂದಾಯವನ್ನು ನಮ್ಮ ಕಟುಂಬದವರು ಕಟ್ಟಿದ್ದಾರೆ ಎಂದು ತೋರಿಸಲು ರಶೀದಿ ಹಾಜರು ಪಡಿಸಿರುವುದಿಲ್ಲ. ನನ್ನ ತಾಯಿ ಮೊದಲಿನಿಂದಲೂ ಗೃಹಿಣಿ ಎಂದರೆ ಸರಿ. ನಾನು 5 ನೇ ತರಗತಿ ಓದುವಾಗ ನನ್ನ ತಂದೆ ಜೀವಂತವಾಗಿದ್ದರು. ನನ್ನ ತಂದೆ ಯಾವಾಗ ತೀರಿಹೋಗಿರುತ್ತಾರೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಯಾವಗ ತೀರಿಹೋಗಿರುತ್ತಾರೆ ಎಂದು ದಿನಾಂಕ,ತಿಂಗಳು, ಇಸವಿ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ಮಧ್ಯಪಾನ ಮಾಡುತ್ತಿದ್ದರು ಎಂದು ವಾದ ಪತ್ರದಲ್ಲಿ ಆಪಾದನೆ ಮಾಡಿರುತ್ತೇನೆ. ನಾನು ಆ ರೀತಿ ಯಾವುದೇ ಆಪಾದನೆ ಮಾಡಿರುವುದಿಲ್ಲ ಎಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ. 15 ವಂಶವೃಕ್ಷವನ್ನು 2018 ನೇ ಇಸವಿಯಲ್ಲಿ ಈ ದಾವೆಗಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. 8 ನೇ ಪ್ರತಿವಾದಿಯವರು ಖರೀದಿಸಿದ ಆಸ್ತಿಯು ಒಟ್ಟು

ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಯು ಸರ್ವೇ ನಂ. 88/1 ರ ಸಂಪೂರ್ಣ ಮಾಲೀಕರಾದ ಕಾರಣ ನಿಪಿ. 7 ರಿಂದ 9 ಆರ್,ಟಿ.ಸಿ ಗಳು ಅವರ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ. 88 ಈ ದಾವೆ ಹಾಕುವ ಕಾಲಕ್ಕೆ ಅಸ್ತಿತ್ವದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನಾನು ಸರ್ವೇ ನಂ. 88 ರಲ್ಲಿ ಭಾಗ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.